# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 339 |
| 2) | ಮಾನ್ಯ ಸದಸ್ಯರ ಹೆಸರು | ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ) |
| 3) | ಉತ್ತರಿಸಬೇಕಾದ ದಿನಾಂಕ | 10/03/2025 |
| 4) | ಉತ್ತರಿಸುವವರು | ಮಾನ್ಯ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು. |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಅನುದಾನಿತ ಐಟಿಐ ತರಬೇತಿ ಕೇಂದ್ರಗಳ ನೌಕರರಿಗೆ ಶ್ರೀ ಥಾಮಸ್ ನೇತೃತ್ವದ ವರದಿಯನ್ನು ಯಾವಾಗ ಜಾರಿಗೆ ತರಲಾಗಿದೆ; (ವಿವರ ಮತ್ತು ಆದೇಶ ನೀಡುವುದು) | ಸರ್ಕಾರಿ ಆದೇಶ ಸಂಖ್ಯೆ: ಕಾಇ 303 ಇಟಿಐ 2014, ದಿನಾಂಕ: 29.12.2014ರ ಆದೇಶದಲ್ಲಿ ಶ್ರೀ ಪಿ.ಎಸ್.ಎಸ್.ಥಾಮಸ್ ವರದಿಯ ಶಿಫಾರಸ್ಸಿನನ್ವಯ ರಾಜ್ಯದಲ್ಲಿನ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗೆ ಇರುವಂತೆ ಪಿಂಚಣಿ, ಗ್ರಾಚ್ಯುಯಿಟಿ, ಸೇವಾ ಸೌಲಭ್ಯಗಳು ಹಾಗೂ ಸೇವಾ ನಿಯಮಗಳನ್ನು ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳ ಸಿಬ್ಬಂದಿಗೆ ಭವಿಷ್ಯವರ್ತಿಯಾಗಿ (Prospective) ನೀಡಲು ಸರ್ಕಾರದ ಮಂಜೂರಾತಿ ನೀಡಲಾಗಿದೆ. ಆದೇಶದ ಪ್ರತಿಯನ್ನು ಅನುಬಂಧ-1ರಲ್ಲಿ ನೀಡಿದೆ.<br><br>ಪಿಂಚಣಿ ಮತ್ತು ಗ್ರಾಚ್ಯುಯಿಟಿ ಸೌಲಭ್ಯವು ರಾಜ್ಯದ 196 ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ದಿನಾಂಕ: 01.04.2006ರ ಪೂರ್ವದಲ್ಲಿ ನೇಮಕಾತಿ ಹೊಂದಿರುವ ಸಿಬ್ಬಂದಿಗೆ ಮಾತ್ರ ಅನ್ವಯಿಸುತ್ತದೆ. ಈ ಆದೇಶವು ಕರ್ನಾಟಕ ಸರ್ಕಾರದ (ಕಾರ್ಯಕಲಾಪಗಳ ನಿರ್ವಹಣೆ) ನಿಯಮಗಳು 1977ರ 17ನೇ ನಿಯಮದ (2)ನೇ ಉಪ ನಿಯಮದ ಪರಂತುಕದ ವ್ಯಾಪ್ತಿಯೊಳಗೆ ಬರುತ್ತದೆ ಮತ್ತು ಅದರಂತೆ ಹೊರಡಿಸಲಾಗಿದೆ.<br><br>ಸರ್ಕಾರಿ ಆದೇಶ ಸಂಖ್ಯೆ: ಕಾಇ 303 ಇಟಿಐ 2014 ದಿನಾಂಕ: 14.11.2016ರ ಆದೇಶದಲ್ಲಿ ಸೇವಾ ಸೌಲಭ್ಯಗಳಾದ 10 ವರ್ಷಗಳ ಕಾಲಬದ್ಧ ಮುಂಬಡ್ತಿ, 15 ವರ್ಷಗಳ ಸ್ವಯಂಚಾಲಿತ ವೇತನ ಮುಂಬಡ್ತಿ, 20-25 ವರ್ಷಗಳ ಹೆಚ್ಚುವರಿ ವೇತನ ಬಡ್ತಿ, ಪಿಂಚಣಿ, ಕುಟುಂಬ ಪಿಂಚಣಿ, ನಿವೃತ್ತಿ ಉಪದಾನ, ಮರಣ ಉಪದಾನ, ಗಳಿಕೆರಜೆ ನಗದೀಕರಣ, ಪರಿವರ್ತಿತ ಪಿಂಚಣಿ ಸೌಲಭ್ಯವನ್ನು ದಿನಾಂಕ: 29.12.2014ರಿಂದ ಭವಿಷ್ಯವರ್ತಿಯಾಗಿ ನೀಡಲಾಗಿರುತ್ತದೆ. ಆದೇಶದ ಪ್ರತಿಯನ್ನು ಅನುಬಂಧ-2ರಲ್ಲಿ ನೀಡಿದೆ. |
| ಆ) | ಸದರಿಯವರಿಗೆ ಥಾಮಸ್ ನೇತೃತ್ವದ ವರದಿಯಂತೆ ಇದುವರೆವಿಗೆ ಇತರೆ ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ನೀಡಿರುವ ಎಲ್ಲ ಸೌಲಭ್ಯಗಳನ್ನು | ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳ ನೌಕರರಿಗೆ ಶ್ರೀ ಥಾಮಸ್ ವರದಿಯಲ್ಲಿನ ಶಿಫಾರಸ್ಸುಗಳನ್ನು ಜಾರಿಗೊಳಿಸಲು 1997ರ ಅನುದಾನ ಸಂಹಿತೆಯನ್ನು ಪರಿಷ್ಕರಿಸಿ Karnataka Technical Education Institutions (Grant-in-aid |

| | | |
|---|---|---|
| | ನೀಡದಿರಲು ಕಾರಣಗಳೇನು; (ವಿವರ ನೀಡುವುದು) | Private Industrial Training Institute) Rules 2023ರ ಕರಡು ನಿಯಮಗಳನ್ನು ಕರ್ನಾಟಕ ರಾಜ್ಯಪತ್ರ ವಿಶೇಷ ಪತ್ರಿಕೆಯಲ್ಲಿ ದಿನಾಂಕ: 30.01.2023ರಂದು ಪ್ರಕಟಿಸಿ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿರುತ್ತದೆ. ಸದರಿ ಕರಡು ನಿಯಮಗಳಿಗೆ ಒಟ್ಟು 512 ಆಕ್ಷೇಪಣೆಗಳು ಸ್ವೀಕೃತವಾಗಿದ್ದು, ಪರಿಶೀಲನಾ ಹಂತದಲ್ಲಿರುತ್ತವೆ. ಸದರಿ ಆಕ್ಷೇಪಣೆಗಳನ್ನು ಪರಿಶೀಲಿಸಿ ವರದಿ ನೀಡಲು ಆಯುಕ್ತರು, ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿದೆ. ಸದರಿ ಸಮಿತಿಯು ವರದಿ ನೀಡಿದ ನಂತರ ನಿಯಮಾನುಸಾರ ಮುಂದಿನ ಕ್ರಮವಹಿಸಲಾಗುವುದು. |
| ಇ) | ಸದರಿ ನೌಕರರಿಗೆ ಥಾಮಸ್ ವರದಿಯ ಶಿಫಾರಸಿನಂತೆ ಸೇವಾ ನಿಯಮಗಳನ್ನು ರೂಪಿಸದೆ ಇರುವುದರಿಂದ ಸಾವಿರಾರು ನೌಕರರು ಯಾವುದೇ ಸೌಲಭ್ಯಗಳಿಲ್ಲದೆ ವಂಚಿತರಾಗಿರುವವರಿಗೆ ಯಾವ ಕಾಲಮಿತಿಯಲ್ಲಿ ಸೇವಾ ನಿಯಮಗಳನ್ನು ರಚಿಸಿ ಎಲ್ಲಾ ಸೌಲಭ್ಯಗಳನ್ನು ನೀಡಲಾಗುತ್ತದೆ; (ವಿವರ ನೀಡುವುದು) | Karnataka Technical Education Institutions (Grant-in-aid Private Industrial Training Institute) Rules 2023ರ ಕರಡು ನಿಯಮಗಳನ್ನು ಕರ್ನಾಟಕ ರಾಜ್ಯ ಪತ್ರ ವಿಶೇಷ ಪತ್ರಿಕೆಯಲ್ಲಿ ದಿನಾಂಕ: 30.01.2023ರಂದು ಪ್ರಕಟಿಸಿ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿರುತ್ತದೆ. ಸದರಿ ಕರಡು ನಿಯಮಗಳಿಗೆ ಸ್ವೀಕೃತವಾಗಿರುವ ಆಕ್ಷೇಪಣೆಗಳು ಪರಿಶೀಲನಾ ಹಂತದಲ್ಲಿರುತ್ತವೆ. ಸದರಿ ಆಕ್ಷೇಪಣೆಗಳನ್ನು ಪರಿಶೀಲಿಸಿ ವರದಿ ನೀಡಲು ಆಯುಕ್ತರು, ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿದೆ. ಸದರಿ ಸಮಿತಿಯು ವರದಿ ನೀಡಿದ ನಂತರ ನಿಯಮಾನುಸಾರ ಮುಂದಿನ ಕ್ರಮವಹಿಸಲಾಗುವುದು. |
| ಈ) | 2006ರ ನಂತರ ಅನುದಾನಕ್ಕೊಳಪಡಿಸಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ/ಬೋಧಕೇತರರಿಗೆ ಶಿಕ್ಷಣ ಇಲಾಖೆಯಲ್ಲಿ ನೀಡುತ್ತಿರುವಂತೆ ನಿವೃತ್ತಿ ನಂತರ ರಜೆ ನಗದೀಕರಣವನ್ನು ಯಾವ ಕಾಲಮಿತಿಯಲ್ಲಿ ನೀಡಲಾಗುವುದು? | ಪ್ರಸ್ತುತ ಜಾರಿಯಲ್ಲಿರುವ ನಿಯಮಗಳನುಸಾರ ದಿನಾಂಕ:01.04.2006ರ ನಂತರ ವೇತನಾನುದಾನಕ್ಕೆ ಒಳಪಟ್ಟು ನಿವೃತ್ತಿಯಾದ ಅನುದಾನಿತ ಸಿಬ್ಬಂದಿಗಳಿಗೆ ನಿವೃತ್ತಿ ನಂತರದ ಗಳಿಕೆ ರಜೆ ನಗದೀಕರಣ ಸೌಲಭ್ಯಗಳನ್ನು ನೀಡಲು ಅವಕಾಶಗಳಿರುವುದಿಲ್ಲ. |

ಸಂಖ್ಯೆ: ಕೌಉಜೀಇ 22 ಕೈತಪ್ರ 2025

(ಡಾ. ಶರಣಪ್ರಕಾಶ ಆರ್ ಪಾಟೀಲ್)
ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು.

ಅನುಬಂಧ - 1

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ಪಿ.ಎಸ್.ಎಸ್.ಥಾಮಸ್ ವರದಿಯ ಶಿಫಾರಸ್ಸಿನನ್ವಯ ರಾಜ್ಯದಲ್ಲಿನ ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಕೇಂದ್ರಗಳ ಸಿಬ್ಬಂದಿ ವರ್ಗದವರಿಗೆ ಪಿಂಚಣಿ, ಗ್ರಾಚ್ಯುಯಿಟಿ, ಸೇವಾ ಸೌಲಭ್ಯಗಳನ್ನು ಮತ್ತು ಸೇವಾ ನಿಯಮಗಳನ್ನೊಳಗೊಂಡಂತೆ ಮಂಜೂರು ಮಾಡುವ ಕುರಿತು.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಕಾಇ 45 ಇಟಿಐ 91 ದಿನಾಂಕ: 15/11/1997.
2. ಸರ್ಕಾರದ ಆದೇಶ ಸಂಖ್ಯೆ: ಕಾಇ 385 ಇಟಿಐ 2005 ದಿನಾಂಕ: 16/01/2007.
3. ಸರ್ಕಾರದ ಆದೇಶ ಸಂಖ್ಯೆ: ಕಾಇ 385 ಇಟಿಐ 2005 ದಿನಾಂಕ: 01/10/2007.
4. ಸರ್ಕಾರದ ಆದೇಶ ಸಂಖ್ಯೆ: ಕಾಇ 58 ಇಟಿಎಂ 2009 ದಿನಾಂಕ: 24/08/2009.
5. ಸರ್ಕಾರದ ಆದೇಶ ಸಂಖ್ಯೆ: ಕಾಇ 29 ಇಟಿಐ 2012 ದಿನಾಂಕ: 18/06/2014.
6. ಸರ್ಕಾರದ ಮುಖ್ಯಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ (ಸಚಿವ ಸಂಪುಟ), ಸಚಿವ ಸಂಪುಟ ವ್ಯವಹಾರಗಳ ಇಲಾಖೆ, ವಿಧಾನಸೌಧ. ಇವರ ಪ್ರಕರಣ ಸಂಖ್ಯೆ: ಸಿ:825/2013 ದಿನಾಂಕ 18/12/2013.
7. ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ: 15/07/2014ರಂದು ನಡೆದ ಸಭೆಯ ನಡವಳಿ.
8. ಸಚಿವ ಸಂಪುಟ ಟಿಪ್ಪಣಿ ವಿಷಯ ಸಂಖ್ಯೆ: ಸಿ:698:2014.
9. ಸರ್ಕಾರದ ಮುಖ್ಯಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ (ಸಚಿವ ಸಂಪುಟ), ಸಚಿವ ಸಂಪುಟ ವ್ಯವಹಾರಗಳ ಇಲಾಖೆ, ವಿಧಾನಸೌಧ. ಇವರ ಪ್ರಕರಣ ಸಂಖ್ಯೆ: ಸಿ:698/2014 ದಿನಾಂಕ 22/12/2014.

**ಪ್ರಸ್ತಾವನೆ:**

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ರಾಜ್ಯದಲ್ಲಿರುವ ಅರ್ಹ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ದಿನಾಂಕ: 1/11/97ರಿಂದ ಅನ್ವಯವಾಗುವಂತೆ ವೇತನ ಸಹಾಯಾನುದಾನವನ್ನು ಷರತ್ತುಗಳು ಮತ್ತು ಈ ಸಂಬಂಧ ತಯಾರಿಸಿರುವ ಸಹಾಯಾನುದಾನ ಸಂಹಿತೆಯಲ್ಲಿ ನಮೂದಿಸಿರುವ ಷರತ್ತುಗಳಿಗೆ ಒಳಪಟ್ಟು ಬಿಡುಗಡೆ ಮಾಡಲು ಸರ್ಕಾರದ ಅನುಮತಿಯನ್ನು ನೀಡಲಾಗಿತ್ತು.

ಮೇಲೆ (2)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಅನುದಾನಿತ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳ ಸಿಬ್ಬಂದಿಗೆ ವೇತನ ಸಹಾಯಾನುದಾನವನ್ನು ಶೇಕಡ 75 ರಿಂದ 85ಕ್ಕೆ ಹೆಚ್ಚುವರಿ ಮಾಡಲು ಮಂಜೂರಾತಿ ನೀಡಲಾಗಿತ್ತು.

ಮೇಲೆ (3)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಕರ್ನಾಟಕ ರಾಜ್ಯದಲ್ಲಿರುವ ಉದ್ಯೋಗ ಮತ್ತು ತರಬೇತಿ ಇಲಾಖೆಯ ಆಡಳಿತ ನಿಯಂತ್ರಣಕ್ಕೆ ಒಳಪಡುವ ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳ ಸಿಬ್ಬಂದಿಗೆ ನೀಡಲಾಗುತ್ತಿರುವ ವೇತನ ಸಹಾಯಾನುದಾನವನ್ನು ಶೇ. 85 ರಿಂದ ಶೇ. 100ಕ್ಕೆ ಹೆಚ್ಚಿಸಲು ಮಂಜೂರಾತಿ ನೀಡಲಾಗಿತ್ತು.

ಮೇಲೆ (4)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಉದ್ಯೋಗ ಮತ್ತು ತರಬೇತಿ ಇಲಾಖೆಯ ಅನುದಾನಿತ ಕೈಗಾರಿಕಾ ತರಬೇತಿ ಕೇಂದ್ರಗಳ ಸಿಬ್ಬಂದಿಗಳಿಗೆ 2009-10ನೇ ಸಾಲಿನ ಬ್ಲಾಕ್ ಅವಧಿಯ ಗಳಿಕೆ ರಜೆಯನ್ನು ಅಧ್ಯರ್ಪಿಸಿ ನಗದೀಕರಣ ಸೌಲಭ್ಯವನ್ನು, ಲಭ್ಯವಿರುವ ಅನುದಾನದಿಂದ ವೆಚ್ಚವನ್ನು ಭರಿಸುವ ಷರತ್ತಿಗೊಳಪಟ್ಟು. ವಿಸ್ತರಿಸಲು ಮಂಜೂರಾತಿ ನೀಡಲಾಗಿತ್ತು.

ಮೇಲೆ (5)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳ ಸಿಬ್ಬಂದಿಗಳಿಗೆ ಗಳಿಕೆ ರಜೆ ನಗದೀಕರಣ ಯೋಜನೆಯನ್ನು 2014-15ನೇ ಸಾಲಿನ ಬ್ಲಾಕ್ ಅವಧಿಯ ಗಳಿಕೆ ರಜೆಯನ್ನು ಅಧ್ಯರ್ಪಿಸಿ ನಗದೀಕರಣ ಸೌಲಭ್ಯವನ್ನು, ಲೆಕ್ಕಶೀರ್ಷಿಕೆ 2230-03-101-0-01 ಖಾಸಗಿ ಅನುದಾನಿತ ತರಬೇತಿ ಸಂಸ್ಥೆಗಳ ಸಹಾಯಾನುದಾನ ಯೋಜನೆಯಡಿ ಲಭ್ಯವಿರುವ ಅನುದಾನದಿಂದ ಭರಿಸುವ ಷರತ್ತಿಗೊಳಪಟ್ಟು ಮಂಜೂರಾತಿ ನೀಡಲಾಗಿತ್ತು.

ಮೇಲೆ (6)ರಲ್ಲಿ ಓದಲಾದ ಸಚಿವ ಸಂಪುಟದ ನಿರ್ಣಯದಲ್ಲಿ ವಿವಿಧ ಇಲಾಖೆಗಳ ಅನುದಾನ ನೀತಿ ಸಂಹಿತೆಗಳನ್ನು ಪರಾಮರ್ಶಿಸಲು ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸಚಿವ ಸಂಪುಟದ ಉಪ ಸಮಿತಿಯು ರಾಜ್ಯದ ಖಾಸಗಿ ಕೈಗಾರಿಕಾ ತರಬೇತಿ ಕೇಂದ್ರಗಳಿಗೆ ರೂಪಿಸಲಾದ ಪರಿಷ್ಕೃತ ಅನುದಾನ ನೀತಿ ಸಂಹಿತೆ 2011ನ್ನೂ ಸಹ ಪರಾಮರ್ಶಿಸಿ ಸೂಕ್ತ ಸಲಹೆ ನೀಡಬೇಕೆಂದು ಸಚಿವ ಸಂಪುಟವು ಇಚ್ಛಿಸಿತು. ಮುಂದುವರೆದು, ಸದರಿ ಉಪ ಸಮಿತಿಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಹಾಗೂ ಮಾನ್ಯ ಕಾರ್ಮಿಕ ರಾಜ್ಯ ಸಚಿವರುಗಳನ್ನು ಸದರಿ ಉಪ ಸಮಿತಿಗೆ ಹೆಚ್ಚುವರಿ ಸದಸ್ಯರುಗಳನ್ನಾಗಿ ನೇಮಿಸಲು ಸಚಿವ ಸಂಪುಟವು ನಿರ್ಧರಿಸಿತು.

ಮೇಲೆ (7)ರಲ್ಲಿ ಓದಲಾದ ಸಭೆಯಲ್ಲಿ ಶ್ರೀ ಪಿ.ಎಸ್.ಎಸ್.ಥಾಮಸ್ ವರದಿಯಲ್ಲಿ ಶಿಫಾರಸ್ಸು ಮಾಡಿರುವ ಪಿಂಚಣಿ, ಗ್ರಾಚ್ಯುಯಿಟಿ, ಸೇವಾ ನಿಯಮಗಳನ್ನೊಳಗೊಂಡಂತೆ ಮತ್ತು ಅನುದಾನಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳಿಗೆ ಒದಗಿಸಿರುವ ಎಲ್ಲಾ ಸೌಲಭ್ಯಗಳನ್ನು ಅನುದಾನಿತ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳ ಸಿಬ್ಬಂದಿಗೂ ವಿಸ್ತರಿಸಲು ಸಚಿವ ಸಂಪುಟ ಉಪ ಸಮಿತಿಯು ಸರ್ವಾನುಮತದ ಅನುಮೋದನೆಯನ್ನು ನೀಡಿತು.

ಮೇಲೆ (8)ರಲ್ಲಿ ಓದಲಾದ ಸಚಿವ ಸಂಪುಟ ಟಿಪ್ಪಣಿಯಲ್ಲಿ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗೆ ಇರುವಂತೆ ಪಿಂಚಣಿ, ಗ್ರಾಚುಯಿಟಿ, ಸೇವಾ ಸೌಲಭ್ಯಗಳು ಮತ್ತು ಸೇವಾ ನಿಯಮಗಳನ್ನು ಖಾಸಗಿ ಅನುದಾನಿತ ತರಬೇತಿ ಸಂಸ್ಥೆಗಳ ಸಿಬ್ಬಂದಿಗೂ ಸಹ ವಿಸ್ತರಿಸಿರುವ ಶ್ರೀ ಪಿ.ಎಸ್.ಎಸ್.ಥಾಮಸ್ ಸಮಿತಿಯ ಶಿಫಾರಸ್ಸನ್ನು ಸಚಿವ ಸಂಪುಟದ ಉಪ ಸಮಿತಿಯು ನಿರ್ಣಯಿಸಿರುವಂತೆ ಸಚಿವ ಸಂಪುಟವು ಅನುಮೋದಿಸಿದಲ್ಲಿ ಉದ್ಭವಿಸಬಹುದಾದ ಆರ್ಥಿಕ ಹೊರೆಯನ್ನು ಇಲಾಖೆಯು ಪ್ರಸ್ತುತ ವೇತನ ಮತ್ತು ಇತರೆ ಭತ್ಯೆಗಳನ್ನು ಪರಿಶೀಲಿಸಿ ಲೆಕ್ಕಾಚಾರ ಮಾಡಿರುತ್ತದೆ. ಈ ಪ್ರಸ್ತಾವನೆಯಿಂದಾಗಿ ಉಂಟಾಗುವ ಆರ್ಥಿಕ ವೆಚ್ಚ 38.44 ಕೋಟಿಗಳಾಗಿದ್ದು, ವಿವರಗಳನ್ನು ನೀಡಲಾಗಿರುತ್ತದೆ. ಆದ್ದರಿಂದ ಸಚಿವ ಸಂಪುಟದ ಉಪಸಮಿತಿಯು ನಿರ್ಣಯಿಸಿರುವಂತೆ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗೆ ಇರುವಂತೆ ಪಿಂಚಣಿ, ಗ್ರಾಚುಯಿಟಿ, ಸೇವಾ ಸೌಲಭ್ಯಗಳು ಮತ್ತು ಸೇವಾ ನಿಯಮಗಳನ್ನು ಖಾಸಗಿ ಅನುದಾನಿತ ತರಬೇತಿ ಸಂಸ್ಥೆಗಳ ಎಲ್ಲಾ ಸಿಬ್ಬಂದಿಗೂ ಸಹ ವಿಸ್ತರಿಸುವ ಶ್ರೀ ಪಿ.ಎಸ್.ಎಸ್.ಥಾಮಸ್ ಸಮಿತಿಯ ಶಿಫಾರಸ್ಸನ್ನು ಅಂಗೀಕರಿಸಲು ಹಾಗೂ ತತ್ಸಂಬಂಧದಲ್ಲಿ ಉಂಟಾಗುವ ವೆಚ್ಚಗಳನ್ನು ಆಯವ್ಯಯದಿಂದ ಭರಿಸಲು ಅನುಮೋದನೆಯನ್ನು ಕೋರಲಾಗಿದೆ.

ಮೇಲೆ (9)ರಲ್ಲಿ ಓದಲಾದ ಸಚಿವ ಸಂಪುಟದ ನಿರ್ಣಯದಲ್ಲಿ ಸಚಿವ ಸಂಪುಟ ಟಿಪ್ಪಣಿಯ ಕಂಡಿಕೆ 16ರಲ್ಲಿ ಒಳಗೊಂಡಿರುವ ಪ್ರಸ್ತಾವನೆಗಳನ್ನು ಸಚಿವ ಸಂಪುಟವು ಅನುಮೋದಿಸುತ್ತಾ, ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗೆ ಇರುವಂತೆ ಪಿಂಚಣಿ, ಗ್ರಾಚ್ಯುಯಿಟಿ, ಸೇವಾ ಸೌಲಭ್ಯಗಳು ಹಾಗೂ ಸೇವಾ ನಿಯಮಗಳನ್ನು 196 ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳ ಸಿಬ್ಬಂದಿಗೆ ಭವಿಷ್ಯವರ್ತಿಯಾಗಿ (Prospective) ನೀಡಲು ಸಚಿವ ಸಂಪುಟವು ನಿರ್ಧರಿಸಿತು.

ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ ಕಾಇ 303 ಇಟಿಐ 2014 ಬೆಂಗಳೂರು, ದಿನಾಂಕ : 29/12/2014**

ಶ್ರೀ ಪಿ.ಎಸ್.ಎಸ್.ಥಾಮಸ್ ವರದಿಯ ಶಿಫಾರಸ್ಸಿನನ್ವಯ ರಾಜ್ಯದಲ್ಲಿನ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗೆ ಇರುವಂತೆ ಪಿಂಚಣಿ, ಗ್ರಾಚ್ಯುಯಿಟಿ, ಸೇವಾ ಸೌಲಭ್ಯಗಳು ಹಾಗೂ ಸೇವಾ ನಿಯಮಗಳನ್ನು ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳ ಸಿಬ್ಬಂದಿಗೆ ಭವಿಷ್ಯವರ್ತಿಯಾಗಿ (Prospective) ನೀಡಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಪಿಂಚಣಿ ಮತ್ತು ಗ್ರಾಚ್ಯುಯಿಟಿ ಸೌಲಭ್ಯವು ರಾಜ್ಯದ 196 ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ದಿನಾಂಕ: 01/04/2006ರ ಪೂರ್ವದಲ್ಲಿ ನೇಮಕಾತಿ ಹೊಂದಿರುವ ಸಿಬ್ಬಂದಿಗೆ ಮಾತ್ರ ಅನ್ವಯಿಸುತ್ತದೆ.

ಈ ಆದೇಶವು ಕರ್ನಾಟಕ ಸರ್ಕಾರದ (ಕಾರ್ಯಕಲಾಪಗಳ ನಿರ್ವಹಣೆ) ನಿಯಮಗಳು, 1977ರ 17ನೇ ನಿಯಮದ (2)ನೇ ಉಪ ನಿಯಮದ ಪರಂತುಕದ ವ್ಯಾಪ್ತಿಯೊಳಗೆ ಬರುತ್ತದೆ ಮತ್ತು ಅದರಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ<br>
ಮತ್ತು ಅವರ ಹೆಸರಿನಲ್ಲಿ<br>
(ವಿ.ಪ್ರಕಾಶ್)<br>
ಪೀಠಾಧಿಕಾರಿ,<br>
ಕಾರ್ಮಿಕ ಇಲಾಖೆ.<br>
(ಉದ್ಯೋಗ ಮತ್ತು ತರಬೇತಿ)

ಗೆ:

ಸಂಕಲನಕಾರರು, ಸರ್ಕಾರಿ ಹೊರವಲಯ ಮುದ್ರಣಾಲಯ, ಕೆಂಗೇರಿ, ಮೈಸೂರು ರಸ್ತೆ, ಬೆಂಗಳೂರು-59 ಇವರ ಮಾಹಿತಿಗೆ ಹಾಗೂ ಈ ಆದೇಶವನ್ನು ಕರ್ನಾಟಕ ರಾಜ್ಯ ಪತ್ರದ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ ಸದರಿ ಪ್ರಕಟಣೆಯ 50 ಪ್ರತಿಗಳನ್ನು ಪೀಠಾಧಿಕಾರಿ-4, ಕಾರ್ಮಿಕ ಇಲಾಖೆ. ಕೊಠಡಿ ಸಂಖ್ಯೆ-411, ನಾಲ್ಕನೇ ಮಹಡಿ, ವಿಕಾಸಸೌಧ, ಬೆಂಗಳೂರು-1 ಇವರಿಗೆ ಕಳುಹಿಸುವಂತೆ ಕೋರಲಾಗಿದೆ.

ಇವರಿಗೆ:

1) ಮಹಾಲೇಖಪಾಲರು (ಎ&ಇ), (ಜಿ&ಎಸ್.ಎಸ್.ಎ), (ಇ&ಆರ್.ಎಸ್.ಎ), ಕರ್ನಾಟಕ, ಬೆಂಗಳೂರು
2) ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ, ಬೆಂಗಳೂರು
3) ಆಂತರಿಕ ಆರ್ಥಿಕ ಸಲಹೆಗಾರರು, ಸಮಾಜ ಕಲ್ಯಾಣ, ಕಾರ್ಮಿಕ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಾಸಸೌಧ
4) ಖಜಾನಾಧಿಕಾರಿ, ರಾಜ್ಯಹುಜೂರ್ ಖಜಾನೆ, ಬೆಂಗಳೂರು
5) ಸರ್ಕಾರದ ಮುಖ್ಯಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ (ಸಚಿವ ಸಂಪುಟ), ಸಚಿವ ಸಂಪುಟ ವ್ಯವಹಾರಗಳ ಇಲಾಖೆ, ವಿಧಾನಸೌಧ. ಇವರಿಗೆ ಪ್ರಕರಣ ಸಂಖ್ಯೆ: ಸಿ:698/2014 ದಿನಾಂಕ 22/12/2014ರ ಉಲ್ಲೇಖಕ್ಕೆ ಸಂಬಂಧಿಸಿದಂತೆ.
6) ಶ್ರೀ ಎಸ್.ಆರ್.ರವಿ, ಅಧ್ಯಕ್ಷರು, ಕರ್ನಾಟಕ ರಾಜ್ಯ ಅನುದಾನಿತ ಕೈಗಾರಿಕಾ ತರಬೇತಿ ನೌಕರರ ಸಂಘ (ರಿ), ಮೂರು ಸಾವಿರ ಮಠ, ಹುಬ್ಬಳ್ಳಿ.
7) ಉಪನಿರ್ದೇಶಕರು, ಖಜಾನೆ ಎನ್.ಎಂ.ಸಿ., ಖನಿಜಭವನ, ರೇಸ್‌ಕೋರ್ಸ್‌ರೋಡ್, ಬೆಂಗಳೂರು
8) ಸರ್ಕಾರದ ಅಧೀನಕಾರ್ಯದರ್ಶಿ, ಆರ್ಥಿಕ ಇಲಾಖೆ, ವೆಚ್ಚ-9, ವಿಧಾನಸೌಧ.
9) ಮಾನ್ಯ ಕಾರ್ಮಿಕ ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
10) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಾರ್ಮಿಕ ಇಲಾಖೆ.
11) ಸರ್ಕಾರದ ಉಪಕಾರ್ಯದರ್ಶಿಯವರ ಆಪ್ತಸಹಾಯಕರು, ಕಾರ್ಮಿಕ ಇಲಾಖೆ
12) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

ಅನುಬಂಧ-2

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ಪಿ.ಎಸ್.ಎಸ್.ಥಾಮಸ್ ವರದಿಯ ಶಿಫಾರಸ್ಸಿನನ್ವಯ ರಾಜ್ಯದಲ್ಲಿನ ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಕೇಂದ್ರಗಳ ಸಿಬ್ಬಂದಿ ವರ್ಗದವರಿಗೆ ಪಿಂಚಣಿ, ಗ್ರಾಚ್ಯುಯಿಟಿ, ಸೇವಾ ಸೌಲಭ್ಯಗಳನ್ನು ಮತ್ತು ಸೇವಾ ನಿಯಮಗಳನ್ನೊಳಗೊಂಡಂತೆ ಮಂಜೂರು ಮಾಡುವ ಕುರಿತು.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ: ಕಾಇ 303 ಇಟಿಐ 2014 ದಿನಾಂಕ: 29/12/2014.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡಾವಳಿ ಸಂಖ್ಯೆ: ಕಾಇ 635 ಇಟಿಐ 2015 ದಿನಾಂಕ: 26.12.2015
3. ಸರ್ಕಾರದ ಅಧಿಸೂಚನೆ ಸಂಖ್ಯೆ: ಕಾಇ 635 ಇಟಿಐ 2015 ದಿನಾಂಕ: 05.01.2016
4. ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರ ಆದೇಶ ಸಂಖ್ಯೆ: ಉತಇ/ತರಬೇತಿ/ಸಂಯೋಜನೆ-1/ವಿವ-9/2003-04 ದಿನಾಂಕ: 11.01.2016
5. ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರ ಪತ್ರ ಸಂಖ್ಯೆ: ಉತಇ/ತ/ಸಂ-02/ವಿವ-59/2015-16 ಪತ್ರ ದಿನಾಂಕ: 24.03.2016
6. ಮಹಾಲೇಖಪಾಲರ ಪತ್ರ ಸಂ: PM/GI/F-29(A)/2016-17, Dt. 20.04.2016
7. ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರ ಪತ್ರ ದಿನಾಂಕ: 11.05.2016

**ಪ್ರಸ್ತಾವನೆ:**

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶ್ರೀ ಪಿ.ಎಸ್.ಎಸ್.ಥಾಮಸ್ ವರದಿಯ ಶಿಫಾರಸ್ಸಿನನ್ವಯ ರಾಜ್ಯದಲ್ಲಿನ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗೆ ಇರುವಂತೆ ಪಿಂಚಣಿ, ಗ್ರಾಚ್ಯುಯಿಟಿ, ಸೇವಾ ಸೌಲಭ್ಯಗಳು ಹಾಗೂ ಸೇವಾ ನಿಯಮಗಳನ್ನು 196 ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳ ಸಿಬ್ಬಂದಿಗೆ ಭವಿಷ್ಯವರ್ತಿಯಾಗಿ (Prospective) ನೀಡಲು ಸರ್ಕಾರದ ಮಂಜೂರಾತಿ ನೀಡಲಾಗಿದೆ. ಪಿಂಚಣಿ ಮತ್ತು ಗ್ರಾಚ್ಯುಯಿಟಿ ಸೌಲಭ್ಯವು ರಾಜ್ಯದ 196 ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ದಿನಾಂಕ: 01/04/2006ರ ಪೂರ್ವದಲ್ಲಿ ನೇಮಕಗೊಂಡಿರುವ ಸಿಬ್ಬಂದಿಗೆ ಮಾತ್ರ ಅನ್ವಯಿಸುತ್ತದೆ.

ಮೇಲೆ (2)ರಲ್ಲಿ ಓದಲಾದ ನಡವಳಿಗಳಲ್ಲಿ ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿನ ಸಿಬ್ಬಂದಿಗಳಿಗೆ ಸೇವಾ ಸೌಲಭ್ಯಗಳನ್ನು ನೀಡುವ ಸಂಬಂಧ "ವೇತನಾನುದಾನಕ್ಕೆ ಒಳಪಟ್ಟ ದಿನಾಂಕ"ದಿಂದ ಸದರಿ ಸೇವಾ ಸೌಲಭ್ಯಗಳನ್ನು ಪರಿಗಣಿಸಿ ದಿನಾಂಕ: 29/12/2014ರವರೆಗೆ ವೇತನವನ್ನು ಅದರಂತೆ ಮರುನಿಗದಿಗೊಳಿಸಿ ಭವಿಷ್ಯವರ್ತಿಯಾಗಿ ಈ ಸೇವಾ ಸೌಲಭ್ಯಗಳನ್ನು ನೀಡಲು ನಿರ್ಧರಿಸಲಾಗಿರುತ್ತದೆ.

ಮೇಲೆ (3)ರಲ್ಲಿ ಓದಲಾದ ಅಧಿಸೂಚನೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ಕಾಇ 303 ಇಟಿಐ 2014 ದಿನಾಂಕ: 29/12/2014ನ್ನು ಅನುಷ್ಠಾನಗೊಳಿಸಲು ಸಕ್ಷಮ ಪ್ರಾಧಿಕಾರವನ್ನಾಗಿ ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರನ್ನು ನೇಮಿಸಿ ಆದೇಶಿಸಲಾಗಿತ್ತು.

---2

ಮೇಲೆ (4)ರಲ್ಲಿ ಓದಲಾದ ನಡವಳಿಯಲ್ಲಿ ರಾಜ್ಯದ 196 ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳ ಪೈಕಿ 181 ಸಂಸ್ಥೆಗಳ ಅರ್ಹ 1888 ಸಿಬ್ಬಂದಿಗಳ ಸೇವಾ ಪುಸ್ತಕ ಹಾಗೂ ವಿದ್ಯಾರ್ಹತೆ ಹಾಗೂ ಇತರೆ ಕಡತಗಳನ್ನು ಪರಿಶೀಲಿಸಿ, ಉಪ ಸಮಿತಿಯನ್ನು ರಚಿಸಿ, ಅರ್ಹ ನೌಕರರಿಗೆ ಭವಿಷ್ಯವರ್ತಿಯಾಗಿ ಆರ್ಥಿಕ ಸೌಲಭ್ಯಗಳಾದ ಕಾಲಬದ್ಧ ವೇತನ ಮುಂಬಡ್ತಿ (Time Bound Advancement) ನೀಡಿ, ವೇತನ ಮರು ನಿಗದಿಪಡಿಸಿ, ಸಂಬಂಧಪಟ್ಟ ನಾಲ್ಕು ವಿಭಾಗೀಯ ಕಛೇರಿಗಳಿಗೆ ಅನುಷ್ಠಾನಗೊಳಿಸಲು ಕಛೇರಿ ಆದೇಶಗಳನ್ನು ರವಾನಿಸಲಾಗಿತ್ತು.

ಮೇಲೆ (5)ರಲ್ಲಿ ಓದಲಾದ ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರ ಪತ್ರದಲ್ಲಿ ಈ ಕೆಳಕಂಡ ಪಟ್ಟಿಯಲ್ಲಿರುವ ಕ್ರಮ ಸಂಖ್ಯೆ: 1 ರಿಂದ 6 ರವರೆಗೆ ಈಗಾಗಲೇ ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಯ ಸಿಬ್ಬಂದಿಗಳಿಗೆ ಎಲ್ಲಾ ಸವಲತ್ತುಗಳನ್ನು ನೀಡಲಾಗುತ್ತಿದ್ದು, ಕ್ರಮ ಸಂಖ್ಯೆ: 7 ರಿಂದ 14 ರವರೆಗಿನ ಸೇವಾ ಸೌಲಭ್ಯಗಳನ್ನು ಪಿ.ಎಸ್.ಎಸ್.ಥಾಮಸ್ ವರದಿಯ ಶಿಫಾರಸ್ಸಿನನ್ವಯ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ನೀಡಲಾಗುತ್ತಿರುವ ಸೌಲಭ್ಯಗಳನ್ನು ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಯ ಸಿಬ್ಬಂದಿಗಳಿಗೆ ವಿಸ್ತರಿಸಬೇಕಾಗಿದ್ದು, ಮೇಲೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಕೇವಲ ಸೇವಾ ಸೌಲಭ್ಯಗಳು ಎಂಬುದಾಗಿ ಇದ್ದು, ಇದನ್ನು ಸ್ಪಷ್ಟವಾಗಿ ಹೆಸರಿಸಿ ಆದೇಶ ನೀಡುವಂತೆ ಕೋರಿರುತ್ತಾರೆ.

| ಕ್ರ. ಸಂ | 1997ರ ಅನುದಾನ ಸಂಹಿತೆಯನ್ವಯ ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳ ಸಿಬ್ಬಂದಿಗಳಿಗೆ ಈಗಾಗಲೇ ನೀಡುತ್ತಿರುವ ಸೌಲಭ್ಯಗಳು | ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಖಾಸಗಿ ಅನುದಾನಿತ ಸಂಸ್ಥೆಗಳ ಸಿಬ್ಬಂದಿಗಳಿಗೆ ನೀಡುತ್ತಿರುವ ಸೌಲಭ್ಯಗಳು | ಶ್ರೀ ಪಿ.ಎಸ್.ಎಸ್.ಥಾಮಸ್ ವರದಿಯನ್ವಯ ಪರಿಶೀಲಿಸಿ ಪ್ರಸ್ತುತ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗಿದೆ | ಷರಾ |
|---|---|---|---|---|
| 1 | ಮೂಲ ವೇತನ | ಮೂಲ ವೇತನ | ಮೂಲ ವೇತನ | ನೀಡಲಾಗುತ್ತಿದೆ |
| 2 | ತುಟ್ಟಿ ಭತ್ಯೆ | ತುಟ್ಟಿ ಭತ್ಯೆ | ತುಟ್ಟಿ ಭತ್ಯೆ | ನೀಡಲಾಗುತ್ತಿದೆ. |
| 3 | ಮನೆ ಬಾಡಿಗೆ ಭತ್ಯೆ | ಮನೆ ಬಾಡಿಗೆ ಭತ್ಯೆ | ಮನೆ ಬಾಡಿಗೆ ಭತ್ಯೆ | ನೀಡಲಾಗುತ್ತಿದೆ. |
| 4 | ನಗರ ಪರಿಹಾರ ಭತ್ಯೆ (ನಿಯಮದಂತೆ) | ನಗರ ಪರಿಹಾರ ಭತ್ಯೆ (ನಿಯಮದಂತೆ) | ನಗರ ಪರಿಹಾರ ಭತ್ಯೆ (ನಿಯಮದಂತೆ) | ನೀಡಲಾಗುತ್ತಿದೆ |
| 5 | ವಾರ್ಷಿಕ ವೇತನ ಬಡ್ತಿ | ವಾರ್ಷಿಕ ವೇತನ ಬಡ್ತಿ | ವಾರ್ಷಿಕ ವೇತನ ಬಡ್ತಿ | ನೀಡಲಾಗುತ್ತಿದೆ |
| 6 | ಬ್ಲಾಕ್ ಅವಧಿಗೆ ಗಳಿಕೆ ರಜೆ ನಗದೀಕರಣ | ಬ್ಲಾಕ್ ಅವಧಿಗೆ ಗಳಿಕೆ ರಜೆ ನಗದೀಕರಣ | ಬ್ಲಾಕ್ ಅವಧಿಗೆ ಗಳಿಕೆ ರಜೆ ನಗದೀಕರಣ | ನೀಡಲಾಗುತ್ತಿದೆ |
| 7 | -- | 10 ವರ್ಷಗಳ ಕಾಲಬದ್ಧ ವೇತನ ಮುಂಬಡ್ತಿ | 10 ವರ್ಷಗಳ ಕಾಲಬದ್ಧ ವೇತನ ಮುಂಬಡ್ತಿ | ಸರ್ಕಾರಿ ಆದೇಶ ಸಂಖ್ಯೆ ಕಾಇ 303 ಐಟಿಐ 2014 ದಿನಾಂಕ: 29/12/2014ರಲ್ಲಿ ಕೇವಲ ಸೇವಾ ಸೌಲಭ್ಯಗಳೆಂದು ತಿಳಿಸಲಾಗಿದ್ದು, ಇವುಗಳಿಗೆ ಸ್ಪಷ್ಟ ಆದೇಶ ಕೋರಲಾಗಿದೆ |
| 8 | -- | 15 ವರ್ಷಗಳ ಸ್ವಯಂ ಚಾಲಿತ ವೇತನ ಮುಂಬಡ್ತಿ | 15 ವರ್ಷಗಳ ಸ್ವಯಂ ಚಾಲಿತ ವೇತನ ಮುಂಬಡ್ತಿ | |
| 9 | -- | 20-25 ವರ್ಷಗಳ ಹೆಚ್ಚುವರಿ ವೇತನ ಬಡ್ತಿ | 20-25 ವರ್ಷಗಳ ಹೆಚ್ಚುವರಿ ವೇತನ ಬಡ್ತಿ | |
| 10 | -- | ಪಿಂಚಣಿ | ಪಿಂಚಣಿ | |
| 11 | -- | ಕುಟುಂಬ ಪಿಂಚಣಿ | ಕುಟುಂಬ ಪಿಂಚಣಿ | |
| 12 | -- | ಗ್ರಾಚ್ಯುಯಿಟಿ (ನಿವೃತ್ತಿ ಉಪದಾನ) / ಡಿಸಿಆರ್‌ಜಿ (ಮರಣ ಉಪದಾನ) | ಗ್ರಾಚ್ಯುಯಿಟಿ (ನಿವೃತ್ತಿ ಉಪದಾನ) / ಡಿಸಿಆರ್‌ಜಿ (ಮರಣ ಉಪದಾನ) | |
| 13 | -- | ಗಳಿಕೆ ರಜೆ ನಗದೀಕರಣ (ನಿವೃತ್ತಿ ನಂತರ) | ಗಳಿಕೆ ರಜೆ ನಗದೀಕರಣ (ನಿವೃತ್ತಿ ನಂತರ) | |
| 14 | -- | ಪರಿವರ್ತಿತ ಪಿಂಚಣಿ ಮೌಲ್ಯ | ಪರಿವರ್ತಿತ ಪಿಂಚಣಿ ಮೌಲ್ಯ | |

ಮೇಲೆ (6)ರಲ್ಲಿ ಓದಲಾದ ಮಹಾಲೇಖಪಾಲರ ಪತ್ರದಲ್ಲಿ ಪಿಂಚಣಿ ಸೌಲಭ್ಯ ನೀಡುವಾಗ ಅರ್ಹತಾದಾಯಕ ಸೇವೆಯನ್ನು (Qualifying Service) ಸರ್ಕಾರಿ ಆದೇಶ ಇಡಿ 18 ಯುಪಿಸಿ 81, ಬೆಂಗಳೂರು ದಿನಾಂಕ: 29/04/1981ರ ಪ್ಯಾರಾ-ಬಿ ರಲ್ಲಿರುವಂತೆ ಅರ್ಹತಾದಾಯಕ ಸೇವೆಯನ್ನು (Qualifying Service) ದಿನಾಂಕ: 29/12/2014ರಿಂದ ಲೆಕ್ಕಾಚಾರಕ್ಕೆ ಪರಿಗಣಿಸುವಂತೆ ಹಾಗೂ ಪಿಂಚಣಿ ಪ್ರಸ್ತಾವನೆಗಳನ್ನು ಸಲ್ಲಿಸುವಾಗ ಸೇವಾ ವಹಿಯಲ್ಲಿ ಕೆಲವೊಂದು ಪ್ರಮಾಣ ಪತ್ರಗಳನ್ನು ನಮೂದಿಸಿ ಸಲ್ಲಿಸಲು ಸೂಚಿಸಿರುತ್ತಾರೆ.

ಮೇಲೆ (7)ರಲ್ಲಿ ಓದಲಾದ ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರ ಪತ್ರದಲ್ಲಿ ಶಿಕ್ಷಣ ಇಲಾಖೆಯ ಸರ್ಕಾರಿ ಆದೇಶ ಸಂಖ್ಯೆ: ಇಡಿ 165 ಟಿಪಿಯು 92, ಬೆಂಗಳೂರು ದಿನಾಂಕ: 28/09/1994ರ ಅನ್ವಯ ಸರ್ಕಾರಿ ಆದೇಶ ಸಂಖ್ಯೆ ಇಡಿ 18 ಯುಪಿಸಿ 81, ಬೆಂಗಳೂರು ದಿನಾಂಕ: 24/09/1981ರ ಆದೇಶಕ್ಕೆ ತಿದ್ದುಪಡಿ ಮಾಡಲಾಗಿದ್ದು, ಅದರನ್ವಯ ಅರ್ಹತಾದಾಯಕ ಸೇವೆಯನ್ನು ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳ ಸಿಬ್ಬಂದಿಗಳು ವೇತನಾನುದಾನಕ್ಕೆ ಒಳಪಟ್ಟ ದಿನಾಂಕದಿಂದ ಪರಿಗಣಿಸುವ ಬಗ್ಗೆ ಅಥವಾ ಟಿಬಿಎಸ್ ಸೌಲಭ್ಯವನ್ನು ವಿಸ್ತರಿಸಲಾದ ದಿನಾಂಕ 29/12/2014ರಿಂದ ಪರಿಗಣಿಸಬೇಕೇ ಎಂಬ ಬಗ್ಗೆ ಮಹಾಲೇಖಪಾಲರನ್ನು ಕೋರಿರುತ್ತಾರೆ.

ಮುಂದುವರೆದು, ಈಗಾಗಲೇ ಸಚಿವ ಸಂಪುಟದಲ್ಲಿ ನಿರ್ಣಯಿಸಿರುವಂತೆ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳ ಸಿಬ್ಬಂದಿಗಳಿಗೆ ಪಿಂಚಣಿ, ವೇತನ, ಸೇವಾ ಸೌಲಭ್ಯ ಹಾಗೂ ಸೇವಾ ನಿಯಮಗಳನ್ನು ಜಾರಿಗೊಳಿಸುವ ಸಂಬಂಧ / ಅನುಷ್ಠಾನಗೊಳಿಸಲು ಈ ಕೆಳಕಂಡ ಅಂಶಗಳಿಗೆ ಸರ್ಕಾರಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ:

1. ಮೇಲೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಸೇವಾ ಸೌಲಭ್ಯಗಳನ್ನು ನಿರ್ದಿಷ್ಟವಾಗಿ ಹೆಸರಿಸಿರುವುದಿಲ್ಲವಾದ್ದರಿಂದ ಶಿಕ್ಷಣ ಇಲಾಖೆಯಲ್ಲಿ ನೀಡಲಾಗುತ್ತಿರುವ ಸೇವಾ ಸೌಲಭ್ಯಗಳು ಅಂದರೆ, 10 ವರ್ಷಗಳ ಕಾಲಬದ್ಧ ವೇತನ ಮುಂಬಡ್ತಿ, 15 ವರ್ಷಗಳ ಸ್ವಯಂ ಚಾಲಿತ ವೇತನ ಮುಂಬಡ್ತಿ, 20-25 ವರ್ಷಗಳ ಹೆಚ್ಚುವರಿ ವೇತನ ಬಡ್ತಿ, ಪಿಂಚಣಿ, ಕುಟುಂಬ ಪಿಂಚಣಿ, ಗ್ರಾಚ್ಯುಯಿಟಿ (ನಿವೃತ್ತಿ ಉಪದಾನ) / ಡಿಸಿಆರ್‌ಜಿ (ಮರಣ ಉಪದಾನ), ಗಳಿಕೆ ರಜೆ ನಗದೀಕರಣ (ನಿವೃತ್ತಿ ನಂತರ), ಪರಿವರ್ತಿತ ಪಿಂಚಣಿ ಮೌಲ್ಯ, ಇವುಗಳನ್ನು ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳ ಸಿಬ್ಬಂದಿಗಳಿಗೆ ವಿಸ್ತರಿಸಿರುವ ಬಗ್ಗೆ ಸರ್ಕಾರಿ ಆದೇಶ ಕೋರಿದೆ.

2. ದಿನಾಂಕ: 14/12/2015ರಂದು ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಯಲ್ಲಿ ತೀರ್ಮಾನಿಸಲಾದಂತೆ ಈ ಸೇವಾ ಸೌಲಭ್ಯಗಳನ್ನು ವಿಸ್ತರಿಸುವಾಗ ಸಂಸ್ಥೆಯ ಸಿಬ್ಬಂದಿಗಳು ಅನುದಾನಕ್ಕೆ ಒಳಪಟ್ಟ ದಿನಾಂಕವನ್ನು ಪರಿಗಣಿಸಿ ಸವಲತ್ತುಗಳನ್ನು ಹಾಗೂ ಅದರಂತೆ ವೇತನ ಮರುನಿಗದಿಗೊಳಿಸಲು ತೀರ್ಮಾನಿಸಲಾಗಿದೆ. ಅನುದಾನಕ್ಕೆ ಒಳಪಟ್ಟ ದಿನಾಂಕದಿಂದ ಸದರಿ ಸೌಲಭ್ಯಗಳನ್ನು ವಿಸ್ತರಿಸಿದ ದಿನಾಂಕ ಅಂದರೆ 29/12/2014ರವರೆಗೆ ಸೇವಾ ಸೌಲಭ್ಯಗಳನ್ನು ನೀಡಿ ವೇತನವನ್ನು ಪರಿಷ್ಕರಿಸಿ (Notional fixation) ತದನಂತರ ಭವಿಷ್ಯವರ್ತಿಯಾಗಿ ನೀಡುವ ಬಗ್ಗೆ ಸರ್ಕಾರಿ ಆದೇಶ ಕೋರಿದೆ.

3. ಪಿಂಚಣಿ; ಕುಟುಂಬ ಪಿಂಚಣಿ, ಗ್ರಾಚ್ಯುಯಿಟಿ (ನಿವೃತ್ತಿ ಉಪದಾನ) / ಡಿಸಿಆರ್‌ಜಿ (ಮರಣ ಉಪದಾನ), ಗಳಿಕೆ ರಜೆ ನಗದೀಕರಣ (ನಿವೃತ್ತಿ ನಂತರ), ಪರಿವರ್ತಿತ ಪಿಂಚಣಿ ಮೌಲ್ಯಗಳಿಗೆ ಅರ್ಹತಾದಾಯಕ ಸೇವೆಯನ್ನು ಶಿಕ್ಷಣ ಇಲಾಖೆಯ ಸರ್ಕಾರಿ ಆದೇಶ ಸಂಖ್ಯೆ: ಇಡಿ 165 ಟಿಪಿಯು 92, ಬೆಂಗಳೂರು ದಿನಾಂಕ: 29/09/1994ರಂತೆ ಪರಿಗಣಿಸುವ ಸಂಬಂಧ ಸರ್ಕಾರಿ ಆದೇಶ ಕೋರಿದೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

**<u>ಸರ್ಕಾರಿ ಆದೇಶ ಸಂಖ್ಯೆ ಕಾಇ 303 ಇಟಿಐ 2014 ಬೆಂಗಳೂರು, ದಿನಾಂಕ: 14/11/2016</u>**

ಶ್ರೀ ಪಿ.ಎಸ್.ಎಸ್.ಥಾಮಸ್ ವರದಿಯ ಶಿಫಾರಸ್ಸಿನನ್ವಯ ರಾಜ್ಯದಲ್ಲಿನ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗೆ ಇರುವಂತೆ ಪಿಂಚಣಿ, ಗ್ರಾಚ್ಯುಯಿಟಿ, ಸೇವಾ

ಸೌಲಭ್ಯಗಳು ಹಾಗೂ ಸೇವಾ ನಿಯಮಗಳನ್ನು 196 ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳ ಅರ್ಹ ಸಿಬ್ಬಂದಿಗೆ ಭವಿಷ್ಯವರ್ತಿಯಾಗಿ (Prospective) ನೀಡಲು ಸರ್ಕಾರದ ಮಂಜೂರಾತಿಯನ್ನು ಈಗಾಗಲೇ ನೀಡಲಾಗಿದೆ. ಇದನ್ನು ಅನುಷ್ಠಾನಗೊಳಿಸುವ ಸಂಬಂಧ ಈ ಕೆಳಕಂಡ ಹೆಚ್ಚುವರಿ ಅಂಶಗಳಿಗೆ ಸರ್ಕಾರದ ಮಂಜೂರಾತಿ ನೀಡಲಾಗಿದೆ.

1. ಸೇವಾ ಸೌಲಭ್ಯಗಳಾದ 10 ವರ್ಷಗಳ ಕಾಲಬದ್ಧ ವೇತನ ಮುಂಬಡ್ತಿ, 15 ವರ್ಷಗಳ ಸ್ವಯಂ ಚಾಲಿತ ವೇತನ ಮುಂಬಡ್ತಿ, 20-25 ವರ್ಷಗಳ ಹೆಚ್ಚುವರಿ ವೇತನ ಬಡ್ತಿ, ಪಿಂಚಣಿ, ಕುಟುಂಬ ಪಿಂಚಣಿ, ಗ್ರಾಚ್ಯುಯಿಟಿ (ನಿವೃತ್ತಿ ಉಪದಾನ) / ಡಿಸಿಆರ್‌ಜಿ (ಮರಣ ಉಪದಾನ), ಪರಿವರ್ತಿತ ಪಿಂಚಣಿ ಮೌಲ್ಯಗಳನ್ನು 124 ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿನ 1450 ಸಿಬ್ಬಂದಿಗಳಿಗೆ ಅನ್ವಯವಾಗುತ್ತದೆ. ಇದಕ್ಕೆ ತಗಲುವ ವೆಚ್ಚ ರೂ. 4.82 ಕೋಟಿಗಳು.
2. ಈ ಸೇವಾ ಸೌಲಭ್ಯಗಳನ್ನು ವಿಸ್ತರಿಸಲು ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ವೇತನಾನುದಾನಕ್ಕೆ ಒಳಪಟ್ಟ ದಿನಾಂಕವನ್ನು ಪರಿಗಣಿಸಿ ಸೇವಾ ಸವಲತ್ತು ಮತ್ತು ವೇತನ ಮರುನಿಗದಿಗೊಳಿಸುವುದು ವೇತನಾನುದಾನಕ್ಕೆ ಒಳಪಟ್ಟ ದಿನಾಂಕದಿಂದ ಈಗಾಗಲೇ ಈ ಸೌಲಭ್ಯಗಳನ್ನು ವಿಸ್ತರಿಸಲಾದ ದಿನಾಂಕ: 29/12/2014ರವರೆಗೆ Notional fixation ಮಾಡಿ ಭವಿಷ್ಯವರ್ತಿಯಾಗಿ ದಿನಾಂಕ: 29/12/2014ರ ನಂತರದ ಅವಧಿಗೆ ಮಾತ್ರ Monetary Compensation ನ್ನು ನೀಡುವುದು. ವೇತನಾನುದಾನಕ್ಕೆ ಒಳಪಟ್ಟ ದಿನಾಂಕದಿಂದ ಸೌಲಭ್ಯಗಳನ್ನು ವಿಸ್ತರಿಸಲಾದ ದಿನಾಂಕ: 29/12/2014ರವರೆಗೆ ಯಾವುದೇ Monetary Compensation / Arrears ನೀಡುವಂತಿಲ್ಲ.
3. ಪಿಂಚಣಿ, ಕುಟುಂಬ ಪಿಂಚಣಿ, ಗ್ರಾಚ್ಯುಯಿಟಿ (ನಿವೃತ್ತಿ ಉಪದಾನ) / ಡಿಸಿಆರ್‌ಜಿ (ಮರಣ ಉಪದಾನ), ಗಳಿಕೆ ರಜೆ ನಗದೀಕರಣ (ನಿವೃತ್ತಿ ನಂತರ), ಪರಿವರ್ತಿತ ಪಿಂಚಣಿ ಮೌಲ್ಯಗಳಿಗೆ ಅರ್ಹತಾದಾಯಕ ಸೇವೆಯನ್ನು ಶಿಕ್ಷಣ ಇಲಾಖೆಯ ಸರ್ಕಾರಿ ಆದೇಶ ಸಂಖ್ಯೆ: ಇಡಿ 165 ಟಿಪಿಯು 92, ಬೆಂಗಳೂರು ದಿನಾಂಕ: 29/09/1994ರಂತೆ ಸದರಿ ಆದೇಶವನ್ನು ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೂ ಸಹ ವಿಸ್ತರಿಸಿ ಅದರಂತೆ ಸೌಲಭ್ಯಗಳನ್ನು 18 ಜನ ಸಿಬ್ಬಂದಿಗಳಿಗೆ ದಿನಾಂಕ: 29/12/2014ರಿಂದ ಭವಿಷ್ಯವರ್ತಿಯಾಗಿ 2015-16ರವರೆಗೆ ರೂ. 1.75 ಕೋಟಿ ಹಾಗೂ 2016-17ನೇ ಸಾಲಿನಲ್ಲಿ ನಿವೃತ್ತಿ ಆಗುವವರಿಗೆ ರೂ. 1.50 ಕೋಟಿ. ಈ ಎಲ್ಲವೂ ಒಟ್ಟಾರೆ ಸೇರಿ ಪಿಂಚಣಿ, ಗ್ರಾಚ್ಯುಯಿಟಿ ರೂ. 3.25 ಕೋಟಿಗಳು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 328 ವೆಚ್ಚ-9/2016, ದಿನಾಂಕ: 22.10.2016 ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬಿ.ಎಸ್.ಮಂಜುನಾಥ್)
ಪೀಠಾಧಿಕಾರಿ,
ಕಾರ್ಮಿಕ ಇಲಾಖೆ.
(ಉದ್ಯೋಗ ಮತ್ತು ತರಬೇತಿ)

ಗೆ.

ಸಂಕಲನಕಾರರು, ಸರ್ಕಾರಿ ಕೇಂದ್ರ ಮುದ್ರಣಾಲಯ, ಕೆಂಗೇರಿ, ಮೈಸೂರು ರಸ್ತೆ, ಬೆಂಗಳೂರು-59 ಇವರ ಮಾಹಿತಿಗೆ ಹಾಗೂ ಈ ಆದೇಶವನ್ನು ಕರ್ನಾಟಕ ರಾಜ್ಯ ಪತ್ರದ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ ಸದರಿ ಪ್ರಕಟಣೆಯ 50 ಪ್ರತಿಗಳನ್ನು ಪೀಠಾಧಿಕಾರಿ-4, ಕಾರ್ಮಿಕ ಇಲಾಖೆ, ಕೊಠಡಿ ಸಂಖ್ಯೆ-411, ನಾಲ್ಕನೇ ಮಹಡಿ, ವಿಕಾಸಸೌಧ, ಬೆಂಗಳೂರು-1 ಇವರಿಗೆ ಕಳುಹಿಸುವಂತೆ ಕೋರಲಾಗಿದೆ